# ಸಿಮೆಂಟ್ ಬೆಂಚಿಗೆ ಹುತ್ತವೇ ಸ್ತಂಭ!



ಶಿವಮೊಗ್ಗ ಜಿಲ್ಲೆಯ ಮುಖ್ಯ ಪೇಟೆಯಿಂದ 10 ಕಿ.ಮೀ. ದೂರದಲ್ಲಿರುವ ಲಯನ್ಸ್ ಆ್ಯಂಡ್ ಟೈಗರ್ ಸಫಾರಿಯ ಆವರಣದೊಳಗೆ ಅಲ್ಲಲ್ಲಿ ತಲೆಯೆತ್ತಿ ನಿಂತಿರುವ ಗೆದ್ದಲೆಂಬ ಸೇರೆಗಾರ ನಿರ್ಮಿಸಿದ ಹುತ್ತಗಳಿವೆ. ಅದರಲ್ಲೂ ಸಿಮೆಂಟ್ ಬೆಂಚಿಗೆ ಹೊಂದಿಕೊಂಡು ಅದಕ್ಕೆ ಆಧಾರಸ್ತಂಭವಾಗಿ ನಿಂತಂತೆ ಕಂಡುಬರುವ ಈ ಹುತ್ತ ವೀಕ್ಷಕರನ್ನು ತನ್ನೆಡೆಗೆ ಸೆಳೆದು ಪ್ರಕೃತಿ ಮತ್ತು ಅದನ್ನು ಬಿಟ್ಟಿರಲಾರದ ಮಾನವನ ನಿರ್ಮಿತಿಯನ್ನು ಸಾರಿ ಹೇಳುವಂತೆ ತೋರುತ್ತದೆ.

**-ಮಹಮ್ಮದ್, ಮೂಡಬಿದಿರೆ**



# ವಿಷಕಾರಿ ಕಾಡು ಟೊಮೆಟೊ

ನೋಡಲು ಅಪ್ಪಟ ಟೊಮೆಟೊದಂತೆ ಕಾಣುವ ಕಾಡು ಟೊಮೆಟೊ ಹೆಸರೇ ಸೂಚಿಸುವಂತೆ ಕಾಡಿನಲ್ಲಿ ಬೆಳೆಯುತ್ತದೆ. ಜನವರಿ–ಫೆಬ್ರುವರಿ ಮಾಸದಲ್ಲಿ ಹಣ್ಣಾಗುವ ಟೊಮೆಟೊ ಬಳ್ಳಿ ಹತ್ತರಿಂದ ಹದಿನೈದು ವರ್ಷಗಳವರೆಗೆ ಆರೈಕೆಯೂ ಇಲ್ಲದೆ ಬದುಕುತ್ತದೆ. ಅತ್ಯಂತ ವಿಷಕಾರಿ ಕಾಡುಹಣ್ಣು ಇದಾಗಿದ್ದು ಇದರ ಮುಳ್ಳು ಕೂಡ ವಿಷದಿಂದ ಕೂಡಿದೆ. ಆದರೆ ಕೆಲವೊಂದು ಪಕ್ಷಿಗಳು ಈ ಹಣ್ಣನ್ನು ತಿನ್ನುತ್ತವೆ.

**-ಚಂದ್ರಹಾಸ ಚಾರ್ಮಾಡಿ, ಬೆಳ್ತಂಗಡಿ**

# ಒಂದು ರೂಪಾಯಿಯ ರೂಪಾಂತರ

ದೇಶದಲ್ಲಿ ಚಲಾವಣೆಯಲ್ಲಿದ್ದ ನಾಣ್ಯ ಹಾಗೂ ನೋಟುಗಳು ಆಯಾ ಕಾಲದ ರಾಜಕೀಯ ಸ್ಥಿತಿ ಗತಿಯ ಮೇಲೆ ಬೆಳಕು ಬೀರುತ್ತವೆ. ಇತಿಹಾಸದ ಸನ್ನಿವೇಶವನ್ನು ಮುಂದಿನ ಜನಾಂಗಕ್ಕೆ ತಿಳಿಸಲು ಸಹಕಾರಿಯಾಗಿವೆ. ಮೊದಲನೆಯ ಒಂದು ರೂಪಾಯಿ ವಿಕ್ಟೋರಿಯಾ ಮಹಾರಾಣಿಯ ಚಿತ್ರದ್ದು ಬೆಳ್ಳಿಯದು. ಇದು ಅರವತ್ನಾಲ್ಕು ತಾಮ್ರದ ದುಡ್ಡುಗಳನ್ನು ಒಳಗೊಂಡ ಮೌಲ್ಯವುಳ್ಳದ್ದು. ಎರಡನೆಯ ಚಿತ್ರದ ನಾಣ್ಯ ಸ್ವಾತಂತ್ರ್ಯಾ ನಂತರ ದೇಶದ ಪ್ರಥಮ ಪ್ರಧಾನ ಮಂತ್ರಿಗಳಾಗಿದ್ದ ಪಂ. ಜವಾಹರಲಾಲ್ ನೆಹರೂರವರ ಚಿತ್ರವನ್ನು ಒಳಗೊಂಡಿದೆ. ಇದು ನೂರು ಪೈಸೆಗಳ ಬೆಲೆಯುಳ್ಳದ್ದು. ನಂತರದ ರೂಪಾಯಿಯ ನಾಣ್ಯ 1977 ರಲ್ಲಿ ಅಚ್ಚಾಗಿದ್ದು. ನಾಲ್ಕನೆಯ ಚಿತ್ರದ ನೋಟು 1981 ರಲ್ಲಿ ಮುದ್ರಿತವಾದ ಒಂದು ರೂಪಾಯಿಯ ಮೌಲ್ಯವುಳ್ಳದ್ದು.

ಐದನೆಯ (ಕೊನೆಯ) ಚಿತ್ರದ ಒಂದು ರೂಪಾಯಿಯ ನಾಣ್ಯ ಸದ್ಯ ಚಲಾವಣೆಯಲ್ಲಿರುವುದು. ಮೊದಲನೆಯ (ಬ್ರಿಟಿಷ್ ಕಾಲದ) ವಿಕ್ಟೋರಿಯಾ ಮಹಾರಾಣಿಯ ಚಿತ್ರದ ಒಂದು ರೂಪಾಯಿಯ ಬೆಳ್ಳಿನಾಣ್ಯ ಈಗ ಚಲಾವಣೆಯಲ್ಲಿ ಇರದಿದ್ದರೂ ಅದು ಬೆಳ್ಳಿಯಾದ್ದರಿಂದ ಅದಕ್ಕೆ ನಾಲ್ಕು ನೂರು ರೂಪಾಯಿಗಳ ಮೌಲ್ಯವಿದೆ. ಉಳಿದ ಒಂದು ರೂಪಾಯಿ ಹಾಗೂ ನೋಟಿಗೆ ಅಷ್ಟೇ ಒಂದು ರೂ. ಕಿಮ್ಮತ್ತಿದೆ.

**ಚಿತ್ರ-ಬರಹ: ಬಸವರಾಜ ಹೂಗಾರ, ಹುನಗುಂದ**

